ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	ಶ್ರೀ ಸುನಿಲ್ ಸುಬ್ರಮಣಿ ಎಂ.ಪಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	36 (245)
ಉತ್ತರಿಸಬೇಕಾದ ದಿನಾಂಕ	02-02-2021
ಉತ್ತರಿಸಬೇಕಾದವರು	ನಗರಾಭಿವೃದ್ಧಿ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಮಡಿಕೇರಿ ನಗರದಲ್ಲಿ ಉತ್ಪತ್ತಿಯಾಗುವ ಒಳಚರಂಡಿ ನೀರನ್ನು ಯಾವ ರೀತಿಯಲ್ಲಿ ಸಂಸ್ಕರಿಸಿ ನಂತರ ಎಲ್ಲಿಗೆ ಹರಿಸಲಾಗುತ್ತಿದೆ (ವಿವರ ನೀಡುವುದು)	ಮಡಿಕೇರಿ ನಗರದಲ್ಲಿ ಉತ್ಪತ್ತಿಯಾಗುವ ಮಲೀನ ನೀರನ್ನು ಒಳಚರಂಡಿ ಕೊಳವೆ ಮಾರ್ಗಗಳ ಮುಖಾಂತರ ಕೆ. ಬಾಡಗ ಗ್ರಾಮದ ಗಾಲ್ಫ್ ಮೈದಾನದ ಬಳಿ ಸರ್ವೆ ನಂ. ೮೦/೬- ಎ, ೮೦/1 ರಲ್ಲಿ ಪ್ರಸ್ತಾಪಿಸಲಾಗಿರುವ 3.0 ಎಂ.ಎಲ್.ಡಿ ಸಾಮರ್ಥ್ಯದ ಎಸ್.ಬಿ.ಟಿ ತಾಂತ್ರಿಕತೆಯ ಮಲೀನ ನೀರು ಸಂಸ್ಕರಣಾಗಾರ ಘಟಕದಲ್ಲಿ ಶುದ್ದೀಕರಿಸಿ ನಂತರ ಪಕ್ಕದಲ್ಲಿ ಹರಿಯುವ ನಾಲೆಗೆ ಹರಿಸಲು ಉದ್ದೇಶಿಸಲಾಗಿದೆ ಮತ್ತು ಮಡಿಕೇರಿಯ ಭೌಗೋಳಿಕತೆಯ ಹಿನ್ನಲೆಯಲ್ಲಿ ೯ ಕಡೆಗಳಲ್ಲಿ ಸೆಪ್ಟಿಕ್ ಟ್ಯಾಂಕ್ ಗಳನ್ನು ನಿರ್ಮಿಸಿ ಮಲೀನ ನೀರನ್ನು ಶುದ್ದೀಕರಿಸಿದ ನಂತರ ನಾಲೆಗೆ ಬಿಡಲಾಗುವುದು.
ಆ)	ಈ ಒಳಚರಂಡಿ ನೀರನ್ನು ಜಲಮೂಲಗಳಿಗೆ ಬಿಡುವ ಮೊದಲು ಶುದ್ದೀಕರಿಸಲಾಗುತ್ತಿದೆಯೇ; ಇದ್ದಲ್ಲಿ, ಯಾವ ಸ್ಥಳದಲ್ಲಿ ಮತ್ತು ಯಾವ ರೀತಿಯಲ್ಲಿ ಶುದ್ದೀಕರಿಸಲಾಗುತ್ತಿದೆ; (ವಿವರ ನೀಡುವುದು)	ಮಡಿಕೇರಿ ನಗರದಲ್ಲಿ ಉತ್ಪತ್ತಿಯಾಗುವ ಮಲೀನ ನೀರನ್ನು ಒಳಚರಂಡಿ ಕೊಳವೆ ಮಾರ್ಗಗಳ ಮುಖಾಂತರ ಕೆ. ಬಾಡಗ ಗ್ರಾಮದ ಗಾಲ್ಫ್ ಮೈದಾನದ ಬಳಿ ಸರ್ವೆ ನಂ. ೮೦/೬- ಎ, ೮೦/1 ರಲ್ಲಿ ಪ್ರಸ್ತಾಪಿಸಲಾಗಿರುವ 3.0 ಎಂ.ಎಲ್.ಡಿ ಸಾಮರ್ಥ್ಯದ ಎಸ್.ಬಿ.ಟಿ ತಾಂತ್ರಿಕತೆಯ ಮಲೀನ ನೀರು ಸಂಸ್ಕರಣಾಗಾರ ಘಟಕದಲ್ಲಿ ಶುದ್ದೀಕರಿಸಲು ಉದ್ದೇಶಿಸಲಾಗಿದೆ. ಮಲೀನ ನೀರು ಶುದ್ದೀಕರಣ ಘಟಕ ನಿರ್ಮಾಣದ ಕಾಮಗಾರಿಯು ಪೂರ್ಣಗೊಂಡ ನಂತರ ಮಲೀನ ನೀರನ್ನು ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಾವಳಿಯಂತೆ ಶುದ್ದೀಕರಿಸಿ ಪಕ್ಕದಲ್ಲಿ ಹರಿಯುವ ಮುಖ್ಯ ನಾಲೆಗೆ ಹರಿಸಲಾಗುವುದು.
ಇ)	ಈ ನೀರನ್ನು ಪೂರ್ಣ ಪ್ರಮಾಣದಲ್ಲಿ ಸಂಸ್ಕರಿಸಿ ಕೆರೆಗೆ ಹರಿಸಲು ಅಥವಾ ಉದ್ಯಾನವನಗಳು ಮತ್ತು ಸರ್ಕಾರಿ ಕಾಮಗಾರಿಗಳಿಗೆ ಬಳಸಲು ಸರ್ಕಾರದ ಕ್ರಮಗಳೇನು? (ವಿವರ ನೀಡುವುದು)	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಈ ಕುರಿತು ವರದಿ ಪಡೆಯಲಾಗುವುದು.

ಸಂಖ್ಯೆ ನಅಇ 21 ಯುಎಂಎಸ್ 2021

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು